**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1086/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿ ಡಬ್ಲ್ಯೂ 03**

**ದಿನಾಂಕಃ 26.11.2024**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಪಿರ್ಯಾದಿ ಬ್ಯಾಂಕನ ಮ್ಯಾನೇಜರ್. ದಿಃ 08.05.2020 ರಂದು ನಾನು ಹರಿಹರದ ಕಾರ್ಪೋರೇಶನ್ ಬ್ಯಾಂಕ್ (ಯೂನಿಯನ್ ಬ್ಯಾಂಕ್ ನೊಂದಿಗೆ ಮರ್ಜ್ ಆಗಿರುತ್ತದೆ) ನಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನನ್ನ ಕರ್ತವ್ಯದ ಕಾಲಾವಧಿಯಲ್ಲಿ ಸಾಲವನ್ನು ನೀಡಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಹೇಳಿರುವ ಸಾಲವನ್ನು ಆರೋಪಿಯ ಮಗನಿಗೆ ಸಾಲವನ್ನು ನೀಡಿರುತ್ತೇವೆ. ಈ ಪ್ರಕರಣದಲ್ಲಿ ಹೇಳಿದ ವಾಹನದ ಸಾಲವನ್ನು ಆರೋಪಿಯ ಮಗನಿಗೆ ನೀಡಿರುತ್ತೇನೆ. ಸಾಲವನ್ನು ಪಡೆಯುವ ಸಂದರ್ಭದಲ್ಲಿ ಆರೋಪಿಯ ಮಗ ಎಷ್ಟು ಹಣವನ್ನು ಡೌನ್ ಪೇಮೆಂಟ್ 2,17,666/- ರೂಗಳನ್ನು ಮಾಡಿರುತ್ತಾರೆ. ನಾವು 5 ಲಕ್ಷ ರೂ ಸಾಲವನ್ನು ನೀಡಿರುತ್ತೇವೆ. ಡೌನ್ ಪೇಮೆಂಟ್ ನ್ನು ಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ಹೇಳಬೇಕು ಎಂದು ನುಡಿಯುತ್ತಾರೆ.

**ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ